# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1181 |
| ಮಾನ್ಯ ಸದಸ್ಯರ ಹೆಸರು | ಶ್ರೀ ಬಸವನಗೌಡ ಬಾದರ್ಲಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 27.08.2026. |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಿಂಧನೂರು ತಾಲ್ಲೂಕಿನಲ್ಲಿ ಪ್ರಸ್ತುತ ಎಷ್ಟು ಮದ್ಯದಂಗಡಿಗಳಿಗೆ ಪರವಾನಗಿ ನೀಡಲಾಗಿದೆ:</td><td>ಸಿಂಧನೂರು ತಾಲ್ಲೂಕಿನಲ್ಲಿ ಪ್ರಸ್ತುತ ಕೆಳಕಂಡಂತೆ ಮದ್ಯದ ಅಂಗಡಿಗಳಿಗೆ ಪರವಾನಿಗೆ ನೀಡಲಾಗಿದೆ.
<table>
<tr><th>ಕ್ರ.<br>ಸಂ.</th><th>ಸನ್ನದು ವಿಧ</th><th>ಸಂಖ್ಯೆ</th></tr>
<tr><td>1.</td><td>ಸಿಎಲ್-2</td><td>21</td></tr>
<tr><td>2.</td><td>ಸಿಎಲ್-4</td><td>01</td></tr>
<tr><td>3.</td><td>ಸಿಎಲ್-7</td><td>05</td></tr>
<tr><td>4.</td><td>ಸಿಎಲ್-9</td><td>13</td></tr>
<tr><td>5.</td><td>MSIL</td><td>07</td></tr>
<tr><td>6.</td><td>ವೈನ್ ಟಾವರಿನ್</td><td>02</td></tr>
<tr><td>7.</td><td>ವೈನ್ ಬೋಟಿಕ್</td><td>01</td></tr>
<tr><td colspan="2">ಒಟ್ಟು</td><td>50</td></tr>
</table></td></tr>
<tr><td>ಆ)</td><td>ಪರವಾನಗಿ ಪಡೆದ ಮದ್ಯದಂಗಡಿಗಳು ನಿಗದಿತ ಸಮಯ ಮತ್ತು ನಿಯಮಗಳನ್ನು ಪಾಲಿಸುತ್ತಿವೆಯೇ;</td><td>ಸಿಂಧನೂರು ವಲಯ ವ್ಯಾಪ್ತಿಯಲ್ಲಿ ಪರವಾನಗಿ ಪಡೆದ ಮದ್ಯದಂಗಡಿಗಳು ಅಬಕಾರಿ ಕಾಯ್ದೆ ಹಾಗೂ ನಿಯಮಗಳನ್ವಯ ಕಾರ್ಯನಿರ್ವಹಿಸುತ್ತಿವೆ.ನಿಯಮ ಉಲ್ಲಂಘನೆ ಕಂಡುಬಂದಂತಹ ಸನ್ನದುಗಳ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ.</td></tr>
<tr><td>ಇ)</td><td>ಸಿಂಧನೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸಿಂಧನೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿರುತ್ತದೆ.</td></tr>
<tr><td>ಈ)</td><td>ಕಳೆದ 3 ವರ್ಷಗಳಲ್ಲಿ ನಿಯಮ ಉಲ್ಲಂಘಿಸಿದ ಮದ್ಯದಂಗಡಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;</td><td>ಸಿಂಧನೂರು ವಲಯ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿದ ಮದ್ಯದ ಅಂಗಡಿಗಳ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ಒಟ್ಟು 144 ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಹೀಗೆ ದಾಖಲಿಸಲಾದ ಪ್ರಕರಣಗಳನ್ನು ದಂಡ ವಿಧಿಸಿ ಇತ್ಯರ್ಥಪಡಿಸಬಹುದಾದ ಕರಣಗಳಾಗಿದ್ದು,ದಂಡದ ರೂಪದಲ್ಲಿ ರೂ.14.89 ಲಕ್ಷ ಮೊತ್ತವನ್ನು</td></tr>
</table>

<table>
<tr><td></td><td></td><td>ವಸೂಲಿಸಲಾಗಿರುತ್ತದೆ. ವರ್ಷಾವಾರು ವಿವರ ಕೆಳಕಂಡಂತೆ.
<table>
<tr><th>ಅಬಕಾರಿ ವರ್ಷ (ಜುಲೈ ನಿಂದ ಜೂನ್ ವರೆಗೆ)</th><th>ದಾಖಲಿಸಲಾದ ಪ್ರಕರಣಗಳ ಸಂಖ್ಯೆ</th><th>ವಸೂಲಿಸಿದ ದಂಡದ ಮೊತ್ತ (ಲಕ್ಷ ರೂ ಗಳಲ್ಲಿ)</th></tr>
<tr><td>2022-23</td><td>62</td><td>3.58</td></tr>
<tr><td>2023-24</td><td>41</td><td>4.96</td></tr>
<tr><td>2024-25</td><td>41</td><td>6.35</td></tr>
<tr><td>ಒಟ್ಟು</td><td>144</td><td>14.89</td></tr>
</table>
</td></tr>
<tr><td>ಉ)</td><td>ಶಾಲೆ, ಕಾಲೇಜು, ದೇವಾಸ್ಥಾನ ಹಾಗೂ ಸಾರ್ವಜನಿಕ ಸ್ಥಳಗಳ ಸಮೀಪ ಮದ್ಯದಂಗಡಿಗಳಿರುವ ಬಗ್ಗೆ ದೂರುಗಳಿವೆಯೇ?</td><td>ಸಿಂಧನೂರು ವಲಯ ವ್ಯಾಪ್ತಿಯಲ್ಲಿ ಶಾಲೆ, ಕಾಲೇಜು, ದೇವಾಸ್ಥಾನ ಹಾಗೂ ಸಾರ್ವಜನಿಕ ಸ್ಥಳಗಳ ಸಮೀಪ ಮದ್ಯದಂಗಡಿಗಳಿರುವ ಬಗ್ಗೆ, ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.</td></tr>
</table>

**ಆಇ 82 ಇಎಲ್‌ಕ್ಯೂ 2026**

(ಕೆ.ಎಂ.ಶಿವಲಿಂಗೇ ಗೌಡ)
ಅಬಕಾರಿ ಸಚಿವರು